# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 705 |
| ಸದಸ್ಯರ ಹೆಸರು | : | ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 18.08.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ಎರಡು ವರ್ಷಗಳಿಂದ ಸಿಂಧನೂರು ತಾಲ್ಲೂಕಿನ ಎಲ್ಲಾ ಸರ್ಕಾರಿ ಶಾಲೆಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು; | ಕಳೆದ ಎರಡು ವರ್ಷಗಳಿಂದ ಸಿಂಧನೂರು ತಾಲ್ಲೂಕಿನಲ್ಲಿರುವ ಎಲ್ಲಾ ಸರ್ಕಾರಿ ಶಾಲೆಗಳಿಗೆ ಒಟ್ಟು **ರೂ.5013.7** ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. |
| ಆ | ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಅನುದಾನ ಬಿಡುಗಡೆಯಾಗಿದೆ; | **ಅನುಬಂಧದಲ್ಲಿ** ಲಗತ್ತಿಸಿದೆ. |
| ಇ | ಪ್ರಗತಿಯಲ್ಲಿರುವ ಯೋಜನೆಗಳಾವುವು; | ಸಿಂಧನೂರು ತಾಲ್ಲೂಕಿನ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಈ ಕೆಳಕಂಡ ಯೋಜನೆಗಳು ಪ್ರಗತಿಯಲ್ಲಿರುತ್ತವೆ.<br>1. ರಾಜ್ಯ ವಲಯದ ಯೋಜನೆಯಡಿ ಶಾಲಾ ಕೊಠಡಿಗಳ ನಿರ್ಮಾಣ, ದುರಸ್ಥಿ, ಶೌಚಾಲಯಗಳ ನಿರ್ಮಾಣ.<br>2. ಕೆ.ಕೆ.ಆರ್.ಡಿ.ಬಿ ಯೋಜನೆಯಡಿ ಮೂಲಭೂತ ಸೌಲಭ್ಯ.<br>3. ಜಿಲ್ಲಾ ಪಂಚಾಯತ್ ವಲಯದ ಯೋಜನೆಯಡಿ ಪೀಠೋಪಕರಣ ಸರಬರಾಜು.<br>4. ವಿದ್ಯಾವಿಕಾಸ ಯೋಜನೆಯಡಿ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಹಾಗೂ ಶೂ-ಸಾಕ್ಸ್ ವಿತರಣೆ.<br>5. ಕ್ಷೀರಭಾಗ್ಯ ಯೋಜನೆಯಡಿ ವಾರದಲ್ಲಿ ಐದು (05) ದಿನ ಬೆಳಗ್ಗೆ 150ml ಬಿಸಿಹಾಲು ಇದರೊಂದಿಗೆ 05 grm ರಾಗಿ ಮಾಲ್ಟ್ ಮಿಕ್ಸ್ ವಿತರಿಸಲಾಗುತ್ತಿದೆ.<br>6. ಮಧ್ಯಾಹ್ನ ಬಿಸಿ ಊಟದೊಂದಿಗೆ ವಾರದಲ್ಲಿ ಆರು (06) ದಿನ ಪೂರಕ ಪೌಷ್ಟಿಕ ಆಹಾರವಾಗಿ ಮೊಟ್ಟೆ ಅಥವಾ ಬಾಳೆಹಣ್ಣು ಉಚಿತವಾಗಿ ವಿತರಿಸಲಾಗುತ್ತಿದೆ. |
| ಈ | ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಹೆಚ್ಚಾಗಿ ದಾಖಲಾತಿ ಮಾಡಿಕೊಳ್ಳಲು ಯಾವ ಯಾವ ಯೋಜನೆಗಳನ್ನು ಜಾರಿಗೆ ತರಲಾಗಿದೆ? | ಸರ್ಕಾರಿ ಪ್ರಾಥಮಿಕ ಮತು ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಹೆಚ್ಚಳಕ್ಕಾಗಿ ಸರ್ಕಾರದಿಂದ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ವಿದ್ಯಾ ವಿಕಾಸ ಯೋಜನೆಯಡಿ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳು, ಶೂ-ಸಾಕ್ಸ್‌ಗಳ ಹಾಗೂ ಸಮವಸ್ತ್ರ, ವಿತರಿಸಲಾಗುತ್ತಿದೆ. |

| | | |
|---|---|---|
| | | 2. ಕ್ಷೀರಭಾಗ್ಯ ಯೋಜನೆಯಡಿ ವಾರದಲ್ಲಿ ಐದು (05) ದಿನ ಬೆಳಗ್ಗೆ 150ml ಬಿಸಿಹಾಲು ಇದರೊಂದಿಗೆ 05 grm ರಾಗಿ ಮಾಲ್ಟ್ ಮಿಕ್ಸ್ ವಿತರಿಸಲಾಗುತ್ತಿದೆ.<br>3. ಮಧ್ಯಾಹ್ನ ಬಿಸಿ ಊಟದೊಂದಿಗೆ ವಾರದಲ್ಲಿ ಆರು (06) ದಿನ ಪೂರಕ ಪೌಷ್ಠಿಕ ಆಹಾರವಾಗಿ ಮೊಟ್ಟೆ ಅಥವಾ ಬಾಳೆಹಣ್ಣು ಉಚಿತವಾಗಿ ವಿತರಿಸಲಾಗುತ್ತಿದೆ.<br>4. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸೌಲಭ್ಯ ಒದಗಿಸಲಾಗುತ್ತಿದೆ.<br>5. ಸಿಂಧನೂರು ತಾಲ್ಲೂಕಿನ ಸರ್ಕಾರಿ ಶಾಲೆಗಳಲ್ಲಿ 50 ಪೂರ್ವ ಪ್ರಾಥಮಿಕ ತರಗತಿಗಳು ಹಾಗೂ 56 ದ್ವಿಭಾಷಾ ಆಂಗ್ಲ ಮಾಧ್ಯಮ ತರಗತಿಗಳು ನಡೆಯುತ್ತಿದ್ದು, ಪ್ರಸಕ್ತ ಸಾಲಿನಲ್ಲಿ 15 ಹೊಸದಾಗಿ ದ್ವಿಭಾಷಾ ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ.<br>6. 11 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕೌಶಲ್ಯಾಧಾರಿತ ತರಬೇತಿ ನೀಡಲು ಎನ್.ಎಸ್.ಕ್ಯೂ.ಎಫ್ ಘಟಕಗಳು ನಡೆಯುತ್ತಿವೆ.<br>7. ಕೇಂದ್ರೀಯ ವಿದ್ಯಾಲಯದ ಮಾದರಿಯಲ್ಲಿ ಪೂರ್ವ ಪ್ರಾಥಮಿಕದಿಂದ 12ನೇ ತರಗತಿವರೆಗೆ ಒಂದೇ ಸೂರಿನಡಿ ಶಿಕ್ಷಣ ನೀಡಲು 02 ಕೆ.ಪಿ.ಎಸ್.ಶಾಲೆಗಳು ಪ್ರಾರಂಭಿಸಲಾಗಿವೆ. |

**ಇಪಿ 145 ಯೋಯೋಕ 2025**

**(ಎಸ್.ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**

**ಅನುಬಂಧ-1**

| ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸನ ಗೌಡ ಬಾದರ್ಲಿ ಚುನಾಯಿತರಾದವರು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:563 (705)ಕ್ಕೆ ಮಾಹಿತಿ | | | |
|---|---|---|---|
| ಕ್ರ ಸಂ | ವರ್ಷ | ಯೋಜನೆಗಳ ವಿವರ | ಬಿಡುಗಡೆಯಾದ ಅನುದಾನ(ಲಕ್ಷಗಳಲ್ಲಿ) |
| 1 | 2023-24 | ರಾಜ್ಯ ವಲಯದ ಯೋಜನೆಯಡಿ ಶಾಲಾ ಕೊಠಡಿ ದುರಸ್ತಿ | 100.100 |
| 2 | 2024-25 | | 40.500 |
| 3 | 2023-24 | ರಾಜ್ಯ ವಲಯದ ಯೋಜನೆಯಡಿ ಶೌಚಾಯಲ ನಿರ್ಮಾಣ ಕಾಮಗಾರಿ | 156.000 |
| 4 | 2023-24 | ಕೆ.ಕೆ.ಆರ್.ಡಿ.ಬಿ ಯೋಜನೆಯಡಿ ಮೂಲಭೂತ ಸೌಲಭ್ಯ | 2476.000 |
| 5 | 2024-25 | | 1443.800 |
| 6 | 2023-24 | ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯೂಮಂಟ್ ಯೋಜನೆಯಡಿ ಪೀಠೋಪಕರಣ ಸರಬರಾಜು | 11.600 |
| 7 | 2024-25 | | 11.600 |
| 8 | 2024-25 | ರಾಜ್ಯವಲಯದ ಮುಂದುವರದ ಯೋಜನೆಯಡಿ ಕೊಠಡಿ ನಿರ್ಮಾಣ | 72.500 |
| 9 | 2023-24 | ಕೆ.ಜಿ.ಬಿ.ವಿ ಮತ್ತು ಕೆ.ಕೆ..ಜಿ.ಬಿವಿ ವಸತಿ ಶಾಲೆಗಳಿಗೆ ದುರಸ್ತಿ ಮತ್ತು ಡಾರ್ಮಟಿ ಕಾಮಗಾರಿ | 153.000 |
| 10 | 2023-24 | ಪಿ.ಎಂ.ಶ್ರೀ ಯೋಜನೆಯಡಿಯಲ್ಲಿ ಶಾಲೆಗಳಿಗೆ ಸೋಲಾರ್ ಅಳವಡಿಕೆ ಮತ್ತು ಪೀಟಪಕರಣ | 5.600 |
| 11 | 2023-24 | ಲೈಬ್ರರಿ ಅನುದಾನ | 0.900 |
| 12 | 2023-24 | ಎಸ್.ಡಿ.ಎಂ.ಸಿ (ELEMENTRY SCHOOL)- | 1.350 |
| 13 | 2023-24 | CWSN ಅನುದಾನ | 6.952 |
| 14 | 2023-24 | KGBV TYPE(1 & 4) ಅನುದಾನ | 24.815 |
| 15 | 2024-25 | CWSN ಅನುದಾನ | 24.588 |
| 16 | 2024-25 | RashtriyaAavishkar Secondry- | 0.200 |
| 17 | 2024-25 | RANGOSTAVA- | 1.500 |
| 18 | 2024-25 | ECCE- | 13.595 |
| 19 | 2024-25 | ADOLESCENCE GIRLS PROGRAMME- | 0.480 |
| 20 | 2024-25 | KARATE GRANT- | 4.320 |
| 21 | 2024-25 | KGBV (TYPE-184) (K) | 121.731 |
| 22 | 2024-25 | SCHOOL GRANT- | 76.201 |
| 23 | 2024-25 | NSQF (PAB) | 4.140 |
| 24 | 2024-25 | QUIZ COMPITATION- | 0.435 |
| 25 | 2024-25 | SPORTS & PHYSICAL EDUCATION (SECONDARY SCHOOL)- | 11.750 |
| 26 | 2024-25 | LIBRARY GRANT - | 9.420 |
| 27 | 2024-25 | 14 MEDIA AND DOCUMENTATION- | 1.845 |
| 28 | 2024-25 | PUSTI GRANT | 2.070 |
| 29 | 2024-25 | PM SHRI | 39.191 |
| 30 | 2023-24 | ಶೂಸಾಕ್ಸ್ | 98.550 |
| 31 | 2024-25 | ಶೂಸಾಕ್ಸ್ | 99.052 |
| | | | **5013.700** |

ನಿರ್ದೇಶಕರು
ಅಪರ ಆಯುಕ್ತರ ಕಛೇರಿ
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ